


ಜೊತೆಗೆ, ಆಗಿನ ಕಲಾಕುಶಲತೆ ಬಗ್ಗೆ ಹೆಮ್ಮೆಯೂ ಮೂಡುತ್ತದೆ. 30 ಮೀಟರ್ (100 ಅಡಿ) ಆಳದ ಬಾವಿಯ ತಳದಲ್ಲಿ ಹಚ್ಚ ಹಸುರಿನ ನೀರು. ಸುತ್ತಲೂ ಕುಸುರಿ ಕೆತ್ತನೆಗಳ ಚಿತ್ತಾಕರ್ಷಕ ಮೆಟ್ಟಿಲುಗಳು ಮಂತ್ರಮುಗ್ಧಗೊಳಿಸಿದವು.

8ನೇ ಶತಮಾನದಲ್ಲಿ ನಿಕುಂಭಿ ರಾಜಮನೆತನದ ರಾಜಾ ಚಾಂದ್, ಪ್ರವಾಸಿಗರ ದಾಹ ತಣಿಸಲು ಈ ಬಾವಿ ಕಟ್ಟಿಸಿದನಂತೆ. ಹೀಗಾಗಿ ಬಾವಿಗೆ ಆತನ ಹೆಸರನ್ನೇ ಇಡಲಾಗಿದೆ. 'ಬಾವಡಿ' ಎಂದರೆ ಮೆಟ್ಟಿಲು ಬಾವಿ. ಕರ್ನಾಟಕದಲ್ಲೂ ಹಂಪಿ, ಹಳೇಬೀಡು, ಶ್ರವಣಬೆಳಗೊಳ ಮುಂತಾದ ಕಡೆಗಳಲ್ಲಿ ವಿಭಿನ್ನ ವಿಶಾಲ ಕಲ್ಯಾಣಿಗಳನ್ನು ನೋಡಬಹುದು.

ಅಭನೇರಿ ಗ್ರಾಮದ ಚಾಂದ್ ಬಾವಡಿ ನಿರ್ಮಾಣದ ಬಗ್ಗೆ ಯಾವ ಶಿಲಾಶಾಸನಗಳ ಪುರಾವೆಯೂ ಇಲ್ಲ. ಆದರೆ ಹತ್ತಿರದಲ್ಲೇ ಇರುವ ಹರ್ಷತ್ ಮಾತಾ ದೇವಸ್ಥಾನದ ಕಂಬ, ಕಮಾನು, ಜಾಲಂಧ್ರ – ಹೀಗೆ ಎಲ್ಲಾ ವಿನ್ಯಾಸಗಳ ಶೈಲಿ ಚಾಂದ್ ಬಾವಡಿಯಲ್ಲೂ ಪ್ರತಿಫಲಿಸಿದೆ. ತಜ್ಞ ಮೋರ್ನಿ ಲಿವಿಂಗ್‌ಸ್ಟನ್ ಪ್ರಕಾರ, ಹರ್ಷತ್ ಮಾತಾ ದೇವಸ್ಥಾನ ಕಟ್ಟುವ ಮೊದಲೇ ಚಾಂದ್ ಬಾವಡಿ ಮೆಟ್ಟಿಲು ಬಾವಿ ಕಟ್ಟಲಾಗಿದೆ. 1200 ವರ್ಷಕ್ಕಿಂತ ಪುರಾತನವಾದ ಈ ಮೆಟ್ಟಿಲು ಬಾವಿಯನ್ನು ಜಗತ್ತಿನ ಅತಿ ಆಳವಾದ, ದೊಡ್ಡದಾದ ವಿಶಿಷ್ಟ ಬಾವಿ ಎಂದು ಇತಿಹಾಸ ತಜ್ಞರು ಬಣ್ಣಿಸಿದ್ದಾರೆ.

ಚಾಂದ್ ಬಾವಡಿ ಮೇಲಿನಿಂದ ಕೆಳಕ್ಕೆ ಹೋದಂತೆ ಚೌಕಾಕಾರದಲ್ಲಿ ಕಿರಿಯದಾಗುತ್ತದೆ. 13 ಅಂತಸ್ತುಗಳಲ್ಲಿ ಕಟ್ಟಲಾದ ಈ ಬಾವಿಯ ಒಟ್ಟು ಮೆಟ್ಟಿಲುಗಳ ಸಂಖ್ಯೆ 3500. ಬಾವಿಯ ಪೂರ್ವ, ಪಶ್ಚಿಮ, ದಕ್ಷಿಣ ದಿಕ್ಕಿನ ಮೂರು ಬದಿಗಳಲ್ಲಿ ಕೆತ್ತನೆಯುಳ್ಳ ಮೆಟ್ಟಿಲುಗಳ ವಿಶೇಷ ವಿನ್ಯಾಸವಿದೆ. ಆ ಶಿಲ್ಪಿಗಳ ಜಾಣ್ಮೆ, ಕುಶಲತೆಯನ್ನು ಮೆಚ್ಚಲೇಬೇಕು.

ಜ್ಯಾಮಿತಿಯ ಅಷ್ಟ ಭುಜಾಕೃತಿಯ ಪಿರಮಿಡ್‌ನಂತೆ ಅಥವಾ ವಜ್ರದಂತೆ ತಿರುವು ಮುರುವಾಗಿ ಮೆಟ್ಟಿಲುಗಳು ರಚನೆಗೊಂಡು ಬಿಸಿಲಿಗೆ ಹೊಳೆಯುತ್ತವೆ. ವಿಶ್ವಕರ್ಮ ವಾಸ್ತುಶಾಸ್ತ್ರದಲ್ಲಿ ಈ ಮೆಟ್ಟಿಲಿನಾಕಾರವನ್ನು 'ವಿಜಯವಾಪಿ' ಎಂದು ಕರೆಯುತ್ತಾರೆ. ಬಾವಿಯ ಮೂರು ಬದಿಗಳ ಹೊರತಾಗಿ ನಾಲ್ಕನೆಯದು ಉತ್ತರಕ್ಕಿದೆ. ಅದೊಂದು ರಾಜಮನೆತನದವರಿಗಾಗಿಯೇ ನಿರ್ಮಿಸಿದ ಉಪ್ಪರಿಗೆಯಂಥ ಮೊಗಸಾಲೆ. ಅಲ್ಲಿ ಕೆಲವು ವಿಶ್ರಾಂತಿ ಕೋಣೆಗಳಿವೆ.

ಬಿಸಿಲಿನ ಬೇಗೆ ಹೆಚ್ಚಾದಾಗ ರಾಜಮನೆತನದವರು ಇಲ್ಲಿ ವಿಶ್ರಾಂತಿ ಪಡೆಯುತ್ತಿದ್ದರಂತೆ. ಬಿಸಿಲಿನ ದಿನಗಳಲ್ಲಿ ಜನರು ಇತರ ಮೂರು ಬದಿಯ ಮೆಟ್ಟಿಲುಗಳ ಮೇಲೆ ಬಂದು ಕೂತು ದಣಿವಾರಿಸಿಕೊಳ್ಳುತ್ತಿದ್ದರಂತೆ. ಬಾವಿಯ ಮೇಲ್ಭಾಗಕ್ಕಿಂತ ತಳಭಾಗದಲ್ಲಿ ಉಷ್ಣಾಂಶ ಆರೇಳು ಡಿಗ್ರಿ ಸೆಂಟಿಗ್ರೇಡ್ ಕಡಿಮೆ ಇರುತ್ತದೆ. ಸದ್ಯ ಮೊಗಸಾಲೆ ಮತ್ತು ಬಾವಿಯ ಮೂರು ಬದಿಯ ಮೆಟ್ಟಿಲುಗಳ ಮೇಲೆ ಪ್ರವೇಶ ನಿಷೇಧಿಸಲಾಗಿದೆ.

ಸೂಕ್ಷ್ಮವಾಗಿ ಗಮನಿಸಿದರೆ ಮೊಗಸಾಲೆ ಮತ್ತಿತರ ಜಾಗಗಳಲ್ಲಿ ಗಣೇಶ, ಮಹಿಷಾಸುರ ಮರ್ದಿನಿ, ಉಮಾ ಮಹೇಶ್ವರ, ಕಾರ್ತಿಕೇಯ, ಯಕ್ಷ, ಬ್ರಹ್ಮ, ವಿಷ್ಣು, ಲಕ್ಷ್ಮಿ ಹಾಗೂ ನರ್ತಕಿಯರ ವಿವಿಧ ಮೂರ್ತಿಗಳು ಕಣ್ಣಿಗೆ ಬೀಳುತ್ತವೆ. 4ನೇ ಬದಿಯ ಮೊಗಸಾಲೆಯಲ್ಲಿ 'ಅಂಧೇರಿ ಉಜಾಲಾ' ಎಂಬ ಜಾಗದಲ್ಲಿ ನೀರೆತ್ತುವ ಚಿಕ್ಕ ರಾಟೆಗಳಿವೆ. ಅಲ್ಲೊಂದು ಚಿಕ್ಕ ಕೊಠಡಿಯಲ್ಲಿ ಸುರಂಗವಿದೆ. ಅದರ ಮೂಲಕ ಅಭನೇರಿಯಿಂದ ಡೌಸಾ ಜಿಲ್ಲಾ ಕೇಂದ್ರದವರೆಗೆ ಹೋಗಬಹುದೆಂದು ಸ್ಥಳೀಯರು ಹೇಳುತ್ತಾರೆ.

ಜಗತ್ತಿನ ಅತಿದೊಡ್ಡ ಮೆಟ್ಟಿಲು ಬಾವಿಯೆಂದೇ ಪ್ರಖ್ಯಾತಿ ಪಡೆದ ಚಾಂದ್ ಬಾವಡಿಯ ಆವರಣದಲ್ಲಿ 'ಭೂಮಿ', 'ದಿ ಫಾಲ್', 'ಪಹೇಲಿ', 'ಭೂಲ್ ಭುಲೈಯಾ', 'ದಿ ಡಾರ್ಕ್ ನೈಟ್ ರೈಸಸ್'ನಂಥ ಅನೇಕ ಸಿನಿಮಾಗಳ ಚಿತ್ರೀಕರಣ ನಡೆದಿವೆ.

ಚಾಂದ್ ಬಾವಡಿಯ ಕೆಲವು ಭಾಗಗಳನ್ನು ಮೊಘಲರು ಹಾಗೂ ಘಜನಿ ಮುಹಮ್ಮದ್ ನಾಶ ಮಾಡಿದರೆಂದು ಇತಿಹಾಸ ತಿಳಿಸುತ್ತದೆ. ಚಾಂದ್ ಬಾವಡಿಯ ಆವರಣದಲ್ಲಿ ಭಗ್ನಗೊಂಡ ಅಸಂಖ್ಯಾತ ಮೂರ್ತಿಗಳು, ಸ್ಮಾರಕಗಳು, ಕಂಬಗಳು ಅನಾಥವಾಗಿ ಬಿದ್ದಿರುವುದನ್ನು ಇಂದಿಗೂ ಕಾಣಬಹುದು. ಆದರೆ ಅವುಗಳನ್ನೆಲ್ಲಾ ಒಟ್ಟುಗೂಡಿಸಿ ಒಪ್ಪ ಓರಣವಾಗಿಸಿ ಪ್ರವಾಸಿಗರಿಗೆ ಪರಿಚಯಿಸುತ್ತಿರುವ ಪುರಾತತ್ವ ಮತ್ತು ಪ್ರಾಚ್ಯಶಾಸ್ತ್ರ ಇಲಾಖೆಯ ಕೆಲಸವನ್ನು ಮೆಚ್ಚಲೇಬೇಕು.

ಪ್ರತಿಕ್ರಿಯಿಸಿ: feedback@sudha.co.in

